# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 156 | Pages. 2 | Date: 28-05-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 156 - ಪುಟಗಳು : 2 | 28-05-2026 | ಗುರುವಾರ | Ph: 8762954248 | ದರ : ₹1


# ಇಂದು ಅಕ್ಷಮಾಲ-ಧಮಾಕ ಮಸಾಲ ಪ್ರಿಮಿಕ್ಸ್

# ಉತ್ಪನ್ನಗಳ ಬಿಡುಗಡೆ: ವೆಬ್‌ಸೈಟ್‌ಗೆ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಸಾಂಪ್ರದಾಯಿಕ ಆಹಾರ ತಯಾರಿಕಾ ಘಟಕಗಳಾದ ಅಕ್ಷಮಾಲ ಫುಡ್ ಅಂಡ್ ಬಿವರೇಜಸ್ ಹಾಗೂ ಧಮಾಕ ಮಸಾಲ ವತಿಯಿಂದ ವಿವಿಧ ಖಾದ್ಯಗಳ ಪ್ರಿಮಿಕ್ಸ್ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸುವ ಹಾಗೂ ವೆಬ್ ಸೈಟ್ ಲೋಕಾರ್ಪಣೆ ಕಾರ್ಯಕ್ರಮ ನಗರದ ಪರ್ಲ್ ಹೋಟೆಲ್‌ನ ಹೇಮಾವತಿ ಸಭಾಂಗಣದಲ್ಲಿ ನಾಳೆ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

ಖ್ಯಾತ ಲೇಖಕ, ನಿರ್ದೇಶಕ, ನಟ ಟಿ.ಎನ್.ಸೀತಾರಾಂ ಮತ್ತು ಅವರ ಪತ್ನಿ ಖ್ಯಾತ ನಿರ್ಮಾಪಕಿ ಗೀತಾ ಸೀತಾರಾಂ ಹಾಗೂ ಪ್ರಸಿದ್ಧ ನಟಿ ಸುಧಾ ಬೆಳವಾಡಿ ಅವರು ಅತಿಥಿಗಳಾಗಿ ಪಾಲ್ಗೊಂಡು, ಉತ್ಪನ್ನಗಳನ್ನು ಮಾರುಕಟ್ಟೆಗೆ ಲೋಕಾರ್ಪಣೆ ಮಾಡಲಿದ್ದಾರೆ ಎಂದು ಶ್ವೇತಾ ಹಾಗೂ ಮಂಜು ಬನವಾಸೆ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮಾರಂಭದಲ್ಲಿ ರವಾ ಇಡ್ಲಿ, ದಾಲ್ ಕಿಚಡಿ, ಪುಳಿಯೊಗರೆ, ಉಪ್ಪಿಟ್ಟು, ದೋಸೆ, ಲೆಮೆನ್ ಪೋಹ ಮುಂತಾದ ನಮ್ಮ ಸಾಂಪ್ರದಾಯಿಕ ಅಹಾರಗಳ ಪ್ರಿಮಿಕ್ಸ್ ಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

ಇದೇ ಮೊದಲ ಬಾರಿಗೆ ಹೆಸರುಬೇಳೆ, ಗಸಗಸೆ, ಶಾವಿಗೆ ಪಾಯಸಗಳ ಪ್ರಿಮಿಕ್ಸ್ ಪರಿಚಯಿಸಲಾಗುತ್ತಿದೆ ಎಂದು ಹೇಳಿದರು.

ಯಾವುದೇ ರೀತಿಯ ಕೃತಕ ಬಣ್ಣ, ರಾಸಾಯನಿಕ ಹಾಗೂ ಪ್ರಿಸರ್ವೇಟರ್ ಗಳನ್ನು ನಮ್ಮ ಉತ್ಪನ್ನಗಳಲ್ಲಿ ಬಳಸುವುದಿಲ್ಲ. ಆಹಾರ ವಿಜ್ಞಾನಿಗಳು, ನುರಿತ ಕನ್ಸಲ್ಟೆಂಟ್‌ಗಳ ಸಹಕಾರದೊಂದಿಗೆ ನಮ್ಮ ಆಹಾರ ಪರಂಪರೆಯ ಭಾಗ ವಾಗಿರುವ ಖಾದ್ಯಗಳ ಪ್ರಿಮಿಕ್ಸ್ ತಯಾರಿಸಿರುವುದು ನಮ್ಮ ಅಗ್ಗಳಿಕೆಯಾಗಿದೆ ಎಂದು ಸಂತಸ ಹಂಚಿಕೊಂಡರರಿ.

ನಮ್ಮ ಬದುಕಿನ ಹಾದಿಯ ಸಂಸ್ಕೃತಿ ಮತ್ತು ಆಹಾರ ಸಂಸ್ಕೃತಿ ಎಂದಿಗೂ ಬೇರೆ ಬೇರೆಯಾಗಿದ್ದೇ ಇಲ್ಲ. ಅಷ್ಟರಮಟ್ಟಿಗೆ ಆಹಾರವೂ ನಮ್ಮ ಸಂಸ್ಕೃತಿಯ ಭಾಗವೇ ಆಗಿದೆ. ಆದರೆ ಆಧುನಿಕತೆ ಹೆಚ್ಚಿದಂತೆ ಮೈಕ್ರೋ ಫ್ಯಾಮಿಲಿಯ ಇಬ್ಬರೂ ದುಡಿಮೆಗೆ ಹೆಚ್ಚಿನ ಸಮಯ ಮೀಸಲಿಡಬೇಕಾದ ಅನಿವಾರ್ಯತೆ ಸೃಷ್ಟಿಯಾದಾಗ, ಅಡುಗೆಗೆ ಬೇಕಾದ ಸಮಯ ಕಡಿತಗೊಳ್ಳಲಾರಂಭಿಸಿತು. ಅದರ ಪರಿಣಾಮವಾಗಿ ನೂರಾರು ವರ್ಷಗಳಿಂದ ನಮ್ಮ ಸಂಸ್ಕೃತಿಯ ಭಾಗವಾಗಿದ್ದ ಸಾಂಪ್ರದಾಯಿಕ ಆಹಾರ ಪದ್ಧತಿ ನಡುವೆ ದಿಢೀರ್ ತಯಾರಾಗುವ ಅನುಕೂಲ ಹೊಂದಿದ್ದ, ಪಾಶ್ಚಿಮಾತ್ಯ ಆಹಾರ ಕ್ರಮ ನಮ್ಮ ಬದುಕಿನೊಳಗೆ ಪ್ರವೇಶ ಪಡೆಯಿತು.

ಅದು ಹೆಲ್ದಿಯೇ, ಅನ್ ಹೆಲ್ದಿಯೇ ಎಂದು ಪರಿಶೀಲಿಸುವ ಸಂಯಮವೂ ಈ ವೇಗದ ಜಗತ್ತಿನಲ್ಲಿ ಇಲ್ಲವಾಯಿತು. ಒಂದು ಆಹಾರ ಸಂಸ್ಕೃತಿಯ ನಾಶ ನಮ್ಮ ಜೀವನ ಸಂಸ್ಕೃತಿಯ ಒಂದು ಪ್ರಮುಖ ಭಾಗಕ್ಕೆ ಹತ್ತಿದ ಗೆದ್ದಲಿನಂತೆಯೇ ಅಪಾಯಕಾರಿಯಾಗಿದೆ. ಪರೋಕ್ಷವಾಗಿ ಇದು ನಮ್ಮ ಸಾಂಪ್ರದಾಯಿಕ ಆಹಾರ ಪದಾರ್ಥಗಳ ಮೂಲವಾದ ಕೃಷಿ ವ್ಯವಸ್ಥೆಯ ಮೇಲಿನ ಪ್ರಹಾರವೂ ಆಗಿದೆ.

ಪತ್ರಕರ್ತೆಯಾಗಿದ್ದ ಶ್ವೇತಾ ಮಂಜುನಾಥ್ ಅವರು ಆರು ವರ್ಷಗಳ ಹಿಂದೆ ಗೃಹೋದ್ಯಮವಾಗಿ ಆರಂಭಿಸಿದ ಅಕ್ಷಮಾಲ ಫುಡ್ ಅಂಡ್ ಬಿವರೇಜಸ್ ಇಂದು ಅಕ್ಕಿ, ಹಲಸು, ಜೀರಿಗೆ, ಪಾಲಕ್, ಟೊಮ್ಯಾಟೋ, ಸಿರಿ ಧಾನ್ಯಗಳು ಸೇರಿದಂತೆ 24 ವಿವಿಧ ಬಗೆಯ ಹಪ್ಪಳ, ಸಂಡಿಗೆ, ವಿವಿಧ ರೀತಿಯ ಉಪ್ಪಿನಕಾಯಿಗಳನ್ನು ಉತ್ಪಾದಿಸುವ ಸಂಸ್ಥೆಯಾಗಿ ಬೆಳೆದಿದೆ. ಹತ್ತಾರು ಮಹಿಳೆಯರಿಗೆ ಉದ್ಯೋಗ ಒದಗಿಸಿದೆ.

ಅದರ ಮುಂದುವರಿದ ಭಾಗವಾಗಿ ಜನ್ಮತಾಳಿರುವ ಧಮಾಕ ಮಸಾಲ ಆಹಾರೋತ್ಪನ್ನ ತಯಾರಿಕಾ ಘಟಕ ಈಗ ಇಬ್ಬರು ತಾಯಂದಿರ ಆಹಾರ, ಆರೋಗ್ಯ ಕಾಳಜಿಯ ಪ್ರತೀಕವೂ ಆಗಿದೆ ಎಂದರು.

ಈಗ ಶ್ವೇತಾ ಅವರೊಂದಿಗೆ ಶರ್ಮಿಳಾ ಪುನೀತ್ ಅವರು ಕೈಜೋಡಿಸಿದ್ದು ಅವರಿಬ್ಬರ ಪಾಲುದಾರಿಕೆಯ ಧಮಾಕ ಮಸಾಲ ಈಗ, ಇನ್ ಸ್ಟ್ಯಾಂಟ್ ಆಹಾರ ಪ್ರಿಯರನ್ನು ಪಾಶ್ಚಿಮಾತ್ಯ ಆಹಾರಗಳಿಂದ ನಮ್ಮ ಸಾಂಪ್ರದಾಯಿಕ ಆಹಾರಗಳ ಕಡೆಗೆ ಅದೇ ಇನ್ ಸ್ಟ್ಯಾಂಡ್ ಮಾದರಿಯಲ್ಲೇ ಕರೆತರುವ ಪ್ರಯತ್ನವಾಗಿ ಹಲವು ಪ್ರಿಮಿಕ್ಸ್ ಗಳನ್ನು ಇಂದು ನಾಡಿನ ಸಂಸ್ಕೃತಿ, ಪರಂಪರೆಯ ಹೆಮ್ಮೆಯ ರಾಯಭಾರಿಗಳ ಉಪಸ್ಥಿತಿಯಲ್ಲಿ ಮಾರುಕಟ್ಟೆಗೆ ಪರಿಚಯಿಸುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಶರ್ಮಿಳಾ ಪುನೀತ್ ಇದ್ದರು.

> ಇಂತಹ ಸಮಯದಲ್ಲಿ ನಮ್ಮ ಸಾಂಪ್ರದಾಯಿಕ ಆಹಾರ ಪದ್ಧತಿಯ ಹಾದಿಗೆ ಇನ್ ಸ್ಟ್ಯಾಂಟ್ ಆಹಾರ ಪ್ರಿಯರನ್ನು ಮರಳಿ ಕರೆತರುವ, ಸ್ಥಳೀಯ ಕೃಷಿ ಉತ್ಪನ್ನಗಳ ಮೌಲ್ಯ ವರ್ಧನೆ ಮೂಲಕ ರೈತರಿಗೆ ಪರೋಕ್ಷವಾಗಿ ನೆರವಾಗಬೇಕು, ಸ್ಥಳೀಯ ಮಹಿಳೆಯರಿಗೆ ಉದ್ಯೋಗಾವಕಾಶ ಸೃಷ್ಟಿಸಬೇಕು ಎನ್ನುವ ಆಲೋಚನೆಯಿಂದ ಹುಟ್ಟಿಕೊಂಡಿರುವ ಆಹಾರ ಸಂಸ್ಕರಣಾ ಘಟಕಗಳೇ ನಿಮ್ಮ ಅಕ್ಷಮಾಲ ಫುಡ್ ಅಂಡ್ ಬಿವರೇಜಸ್ ಹಾಗೂ ಧಮಾಕ ಮಸಾಲ.

**ಟಿ.ಎನ್.ಸೀತಾರಾಂ, ಗೀತಾ ಸೀತಾರಾಂ, ಸುಧಾ ಬೆಳವಾಡಿ, ಸತ್ಯರಾವ್ ಭಾಗಿ ಮೊದಲಾದವರು ಭಾಗಿ**

## ಮೇ 31ರಿಂದ ಚನ್ನರಾಯಪಟ್ಟಣದಲ್ಲಿ ಸೊಲ್ಲಾಪುರ ರೈಲು 'ಸ್ಟಾಪ್' ಕೊಡುತ್ತೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸೊಲ್ಲಾಪುರ- ಹಾಸನ ಎಕ್ಸ್‌ಪ್ರೆಸ್ ರೈಲು ಮೇ 31ಕ್ಕೆ ಚನ್ನರಾಯಪಟ್ಟಣದಲ್ಲಿ ನಿಲುಗಡೆ ನೀಡಲಾಗುವುದು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಅಂದು ಸಂಜೆ 4.30 ಕ್ಕೆ ರೈಲು ನಿಲುಗಡೆ ಕಾರ್ಯಕ್ರಮಕ್ಕೆ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಚಾಲನೆ ನೀಡಲಿದ್ದಾರೆ. ಚನ್ನರಾಯಪಟ್ಟಣದಲ್ಲಿ ನಿಲುಗಡೆ ನೀಡುತ್ತಿರುವುದರಿಂದ ಈ ಭಾಗದ ಸುತ್ತಲಿನ ಪ್ರಯಾಣಿಕರಿಗೆ ಪ್ರಸಿದ್ಧ ಯಾತ್ರಾ ಸ್ಥಳ ಮಂತ್ರಾಲಯಕ್ಕೆ ತೆರಳಲು ಅನುಕೂಲವಾಗಲಿದೆ ಎಂದರು.

ಚನ್ನರಾಯಪಟ್ಟಣದಲ್ಲಿ ನಿಲುಗಡೆ ನೀಡುವಂತೆ ಕಳೆದ ಕೆಲ ವರ್ಷಗಳಿಂದ ರೈಲ್ವೆ ಸಚಿವರಿಗೆ, ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಾ.ಸಿ.ಎನ್. ಮಂಜುನಾಥ್, ಸಂಸದ ಶ್ರೇಯಸ್ ಎಂ ಪಟೇಲ್ ಸೇರಿ ನಾನು ಮನವಿ ಸಲ್ಲಿಸಿದ್ದೆ. ಇದಕ್ಕಾಗಿ ಸಚಿವ ಸೋಮಣ್ಣ ಅವರನ್ನು ಅಭಿನಂದಿಸಲಾಗುವುದು ಎಂದು ತಿಳಿಸಿದರು.

## ಮೇ.29 ರಂದು ವಿದ್ಯುತ್ ವ್ಯತ್ಯಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಹಾಸನ ನಗರ ಉಪವಿಭಾಗ ವ್ಯಾಪ್ತಿಯಲ್ಲಿ ವಿದ್ಯಾನಗರ ಮಾರ್ಗದ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮೇ.29 ರಂದು ಬೆಳಗ್ಗೆ 10 ಗಂಟೆಯಿಂದ 05 ಗಂಟೆಯವರೆಗೆ ವಿದ್ಯಾನಗರ, ಚಿಕ್ಕಹೊನ್ನೇನಹಳ್ಳಿ, ಪಶು ವೈದ್ಯಕೀಯ ಕಾಲೇಜು, ದಾಸರಕೊಪ್ಪಲು, ಎಂ.ಜಿ ರಸ್ತೆ, ಗುಂಡೇಗೌಡನಕೊಪ್ಪಲು, ಹರಳಹಳ್ಳಿ, ತನ್ವಿತ್ರಿಷ ಸರ್ಕಲ್, ಜಯನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯ ಮತ್ತು ಪಾಲನ ವಿಭಾಗ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 1 ಎಕರೆ ಜಮೀನು ಅಕ್ರಮ ಖಾತೆ

### ಉಳುಮೆ ಮಾಡುತ್ತಿದ್ದ ರೈತರ ಆರೋಪ ಖಾತೆ ಮಾಡಿಸಿಕೊಂಡವರಿಂದ ನಿರಾಕರಣೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಕಲಗೂಡು ತಾಲೂಕಿನ ಕೋಣನೂರು ಹೋಬಳಿ ಹಿರೇಹಳ್ಳಿ ಸರ್ವೆ ನಂಬರ್ 106ರಲ್ಲಿ ಪಹಣಿದಾರ ರೈತರಾದ ದ್ಯಾವೇಗೌಡ ಎಂಬುವರಿಗೆ ಸೇರಿದ 1 ಎಕರೆ ಜಮೀನನ್ನು ಅಕ್ರಮವಾಗಿ ಸುಳ್ಳು ದಾಖಲೆ ಸೃಷ್ಟಿಸಿ ಮೈಸೂರು ಜಿಲ್ಲೆಯ ಶ್ರೀಧರ್ ಎಂಬುವರಿಗೆ ಮಾರಾಟ ಮಾಡಲಾಗಿದೆ ಎಂದು ಆನಂದ ಎಂಬುವರು ಆರೋಪಿಸಿದರು.

ಈ ಜಮೀನನ್ನು ನಾನು ಕಳೆದ ಹತ್ತಾರು ವರ್ಷಗಳಿಂದ ಉಳುಮೆ ಮಾಡುತ್ತಾ ಜೀವನ ಸಾಗಿಸುತ್ತಿದೆ. ಸದರಿ ಜಮೀನು ದ್ಯಾವೇಗೌಡ ಬಿನ್ ದ್ಯಾವೇಗೌಡ ಎಂಬುವರ ಹೆಸರಿನಲ್ಲೇ ಇದೆ. ಆದರೆ ಇದನ್ನು ನಿಮ್ಮಂತೆ ಮಾಡಿಕೊಡುವುದಾಗಿ ಹೇಳಿ ಜಮೀನಿನ ಎಲ್ಲ ದಾಖಲೆಗಳನ್ನು ಪಡೆದುಕೊಂಡು ಹೋದ ನಿವೃತ್ತ ಅರಣ್ಯಾಧಿಕಾರಿ ಹಾಗೂ ದೊಡ್ಡಪ್ಪ ಮೊಗಣ್ಣಗೌಡ ಎಂಬುವರು ಬೇರೆಯವರಿಗೆ ಖಾತೆ ಮಾಡಿಸಿಕೊಟ್ಟಿದ್ದಾರೆ ಎಂದು ದೂರಿದರು.

ಇದರಿಂದ ನಮಗೆ ಅನ್ಯಾಯವಾಗಿದ್ದು, ಕೂಡಲೇ ನಮಗೆ ನ್ಯಾಯ ಒದಗಿಸಿಕೊಡುವಂತೆ ಅವರು ಮನವಿ ಮಾಡಿದರು.

ಇದೇ ವೇಳೆ ಅದೇ ರಾಜೇಶ್ ಎಂಬುವರು ಮಾತನಾಡಿ, ಅರಕಲಗೂಡು ತಹಸೀಲ್ದಾರ್ ಸೌಮ್ಯ ಎಂಬುವರು ಇಂಥ ಸಾಕಷ್ಟು ಅಕ್ರಮಗಳಿಗೆ ಕಾರಣರಾಗಿದ್ದಾರೆ. ದಲಿತರಿಗೆ ತೊಂದರೆ ಕೊಡುತ್ತಿದ್ದಾರೆ. ನಿರಾಶ್ರಿತರಿಗೆ ಮನೆಗಳನ್ನು ನೀಡಿಲ್ಲ. ಇವರ ಅವಧಿಯಲ್ಲಿ ತಾಲೂಕು ಕಚೇರಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತಿದೆ. ಜಿಲ್ಲಾಧಿಕಾರಿ ಅವರು ಈ ಬಗ್ಗೆ ಗಮನ ಹರಿಸಿ ಅರಕಲಗೂಡು ತಹಸೀಲ್ದಾರ್ ಕಚೇರಿಯ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ರಮೇಶ್, ರಾಜೇಗೌಡ, ರವಿ ಮೊದಲಾದವರಿದ್ದರು.

ದಾಖಲೆ ಪ್ರಕಾರ ಖಾತೆ: ಇದೇ ಜಮೀನನ್ನು ಖಾತೆ ಮಾಡಿಸಿಕೊಂಡಿರುವ ಶ್ರೀಧರ್ ಎಂಬುವರು ಮಾತನಾಡಿ, ಕಳೆದ 30-40 ವರ್ಷಗಳ ಹಿಂದೆ ಸದರಿ ಜಮೀನನ್ನು ನಮ್ಮ ತಂದೆ ಮೊಗಣ್ಣಗೌಡ ಎಂಬುವರ ತಂದೆಗೆ ನೀಡಿದ್ದರು.

ಅದನ್ನೀಗ ನಮ್ಮಂತೆ ಮಾಡಿಕೊಡಿ ಎಂದು ನಾವು ಕೇಳಿದೆವು. ನಮ್ಮ ಬಳಿಯಿರುವ ದಾಖಲೆ ಪರಿಶೀಲಿಸಿ ತಹಸೀಲ್ದಾರ್ ಅವರು ತಂದೆ ಹೆಸರಿನಲ್ಲಿ ಇದ್ದ ಜಮೀನನ್ನು ನಮಗೆ ಪೌತಿಖಾತೆ ಮಾಡಿಕೊಟ್ಟಿದ್ದಾರೆ ಎಂದು ಸ್ಪಷ್ಟಪಡಿಸಿದರು.. ಇದರಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ನಕಲಿ ಖಾತೆಯನ್ನೂ ಸೃಷ್ಟಿ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ನಮ್ಮ ವಿರುದ್ಧ ಆರೋಪ ಮಾಡುತ್ತಿರುವವರ ಬಳಿ ಯಾವುದೇ ದಾಖಲೆಗಳಿಲ್ಲ. ಅಗತ್ಯಬಿದ್ದರೆ ಎರಡೂ ಕಡೆಯವರ ಬಳಿ ಇರುವ ದಾಖಲೆ ಪರಿಶೀಲಿಸಿ, ಯಾರ ದಾಖಲೆ ಸರಿ ಇವೆಯೋ ಆ ಪ್ರಕಾರ ಕ್ರಮ ಕೈಗೊಳ್ಳಲಿ ಎಂದರು. ಮೊಗಣ್ಣಗೌಡ ಮಾತನಾಡಿ ನಾನು ಯಾವುದೇ ಜಮೀನನ್ನು ಯಾರಿಗೂ ಮಾಡಿಕೊಟ್ಟಿಲ್ಲ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಅಣ್ಣೇಗೌಡ, ಈರಣ್ಣಗೌಡ, ಕೃಷ್ಣೇಗೌಡ ಇದ್ದರು.

## ಇಂದು ವಿಶ್ವದ ಮೊದಲ ವಾಟರ್ ಹಾರ್ವೆಸ್ಟಿಂಗ್ ಸಿಸ್ಟಂನ ಪ್ರಾತ್ಯಕ್ಷಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಎಲ್ಲ ರೀತಿಯ ಕೃಷಿಗೆ ನೀರಿನ ಕೊರತೆ, ಅಸ್ಥಿರ ಮಳೆ, ಕಾರ್ಮಿಕರ ಅಭಾವ ಹಿನ್ನೆಲೆಯಲ್ಲಿ ರೈತರಿಗೆ ಆಧುನಿಕ ತಂತ್ರಜ್ಞಾನ ಆಧಾರಿತ ನೀರಾವರಿ ಪರಿಹಾರ ಒದಗಿಸುವ ಉದ್ದೇಶದಿಂದ ಅತ್ಯಾಧುನಿಕ ಹೈ-ಪ್ರೆಷರ್ ಸ್ಪ್ರಿಂಕ್ಲರ್ ವ್ಯವಸ್ಥೆ ಪ್ರಾತ್ಯಕ್ಷಿಕೆಯನ್ನು ಮೇ 28 ರಂದು ಸಕಲೇಶಪುರ ತಾಲ್ಲೂಕಿನ ಸುಂಡೆಕೆರೆ ಗ್ರಾಮದ ಕಿರೇಹಳ್ಳಿ ಕಾಫಿ ತೋಟದಲ್ಲಿ ಆಯೋಜಿಸಲಾಗಿದೆ ಎಂದು ರೈನ್ ವಾಟರ್ ಹಾರ್ವೆಸ್ಟಿಂಗ್ ಸಿಸ್ಟಂನ ಎಂಡಿ ಮೈಕಲ್ ಸದಾನಂದ ಬ್ಯಾಪ್ಟಿಸ್ಟ್ ತಿಳಿಸಿದರು.

ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜರ್ಮನಿಯ ಆಸ್ಟ್ರಿಯಾ ಮೂಲದ ಕಂಪನಿ ಹಾಗೂ ಏಔಒಇಖಿ ಕೆ.ಒ.ಎಂ.ಇ.ಟಿ. ಸಂಸ್ಥೆಗಳ ಸಹಯೋಗದಲ್ಲಿ ವಾಟರ್‌ಜೆಟ್ ಇಂಜಿನಿಯರ್ಸ್ ಸಂಸ್ಥೆ ಈ ಅತ್ಯಾಧುನಿಕ ಯೋಜನೆ ರೂಪಿಸಿದೆ ಎಂದರು. ಪ್ರಪಂಚದಲ್ಲೇ ಮೊದಲ ಬಾರಿಗೆ ನಡೆಯುತ್ತಿರುವ ಪ್ರಾತ್ಯಕ್ಷಿಕೆಯಲ್ಲಿ ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕಾಫಿ, ಮೆಣಸು, ಅಡಕೆ ಹಾಗೂ ಇತರೆ ವಾಣಿಜ್ಯ ಬೆಳೆಗಾರರು ಭಾಗವಹಿಸುವ ನಿರೀಕ್ಷೆಯಿದೆ. ಜೊತೆಗೆ ಹಿರಿಯ ಐಎಎಸ್ ಅಧಿಕಾರಿ ನವೀನ್‌ರಾಜ್ ಸಿಂಗ್ ಸಹ ಭಾಗಿಯಾಗಲಿದ್ದಾರೆ ಎಂದರು.

ಈ ಪ್ರಾತ್ಯಕ್ಷಿಕೆಯಲ್ಲಿ ಕೃಷಿ ಕ್ಷೇತ್ರದಲ್ಲಿ ವೇಗವಾಗಿ ಜನಪ್ರಿಯವಾಗುತ್ತಿರುವ ಬಿಗ್ ಗನ್ ಸ್ಪ್ರಿಂಕ್ಲರ್ ತಂತ್ರಜ್ಞಾನವನ್ನು ಕಾಫಿ ತೋಟದ ಪರಿಸರದಲ್ಲಿ ಪ್ರದರ್ಶಿಸಲಾಗುತ್ತದೆ. ಅತಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಪ್ರದೇಶಕ್ಕೆ ಸಮ ಪ್ರಮಾಣದಲ್ಲಿ ಮಳೆಯ ರೀತಿಯಲ್ಲೇ ನೀರಾವರಿ ಸೌಲಭ್ಯ ನೀಡುವುದು ಇದರ ಉದ್ದೇಶ ಎಂದರು.

ಯೋಜನೆಗೆ 1010 ಕೆವಿಎ ಸಾಮರ್ಥ್ಯದ ಕಿರ್ಲೋಸ್ಕರ್ ಡೀಸೆಲ್ ಜನರೇಟರ್ ಅಳವಡಿಸಲಾಗಿದ್ದು, 1210 ಹೆಚ್.ಪಿ. ಸಾಮರ್ಥ್ಯದ ಇಂಜಿನ್ ಅಳವಡಿಸಲಾಗಿದೆ.

4000 ಲೀಟರ್ ಸಾಮರ್ಥ್ಯದ ಇಂಧನ ಸಂಗ್ರಹ ವ್ಯವಸ್ಥೆ ಹೊಂದಿರುವ ಈ ಘಟಕವು ನಿರಂತರ ಕಾರ್ಯಾಚರಣೆಗೆ ಸೂಕ್ತವಾಗಿದ್ದು, ಸಂಪೂರ್ಣ ವ್ಯವಸ್ಥೆಗೆ ವಿದ್ಯುತ್ ಪೂರೈಸುತ್ತದೆ ಎಂದು ಹೇಳಿದರು. 45 ಅಡಿ ಆಳದ ಅತ್ಯಾಧುನಿಕ ಜ್ಯಾಕ್‌ವೆಲ್ ನಿರ್ಮಾಣ ಮಾಡಲಾಗಿದೆ. ದೊಡ್ಡ ವ್ಯಾಸದ ಪ್ರಿಕಾಸ್ಟ್ ಕಾಂಕ್ರಿಟ್ ಉಂಗುರಗಳ ಮೂಲಕ ನಿರ್ಮಿಸಲಾದ ಈ ಜ್ಯಾಕ್‌ವೆಲ್ ಹೈಡ್ರೋಸ್ಟಾಟಿಕ್ ಒತ್ತಡ ತಡೆಯುವಂತೆ ವಿನ್ಯಾಸಗೊಳಿಸಲಾಗಿದೆ. 20 ಎಂಎಂ ಟಿಎಂಟಿ ರಾಡ್‌ಗಳ ಮೂಲಕ ಸಂಪೂರ್ಣ ರಚನೆ ಬಲಪಡಿಸಲಾಗಿದೆ. ಇದರಿಂದ ಮಳೆ ಕೊರತೆಯಿಂದ ಕಾಫಿ ಬೆಳೆಗೆ ತಗಲುವ ಸಮಸ್ಯೆಯನ್ನು ತಪ್ಪಿಸಬಹುದು ಎಂದರು. ಇದರ ವಿಶೇಷತೆ ಎಂದರೆ 24 ಗಂಟೆಯಲ್ಲಿ ಬರೋಬ್ಬರಿ 3 ಎಕರೆಗೆ ನೀರು ಪೂರೈಸಬಹುದು. ಮಳೆ ಬಂದಾಗ ನೀರು ಪೋಲಾಗದಂತೆ ಸಂಗ್ರಹಿಸಿಕೊಂಡರೆ ಬೇಸಿಗೆಯಲ್ಲೂ ಬೆಳೆಗಳಿಗೆ ನೀರು ಬಳಕೆ ಮಾಡಿಕೊಳ್ಳಬಹುದು ಎಂದ ಅವರು, ಜಮೀನು ಅಥವಾ ತೋಟದ ಎಲ್ಲ ಕಡೆ ಸಮನಾಗಿ ನೀರು ಬೀಳಲಿದೆ.

ಸುದೀರ್ಘ ಕಾಲ ಸೌಲಭ್ಯ ಪಡೆಯಬಹುದು. ಅರ್ಧ ಎಕರೆಯಿಂದ 1 ಸಾವಿರ ಎಕರೆವರೆಗೂ ಆಯಾ ಸಾಮರ್ಥ್ಯಕ್ಕೆ ತಕ್ಕಂತೆ ಚಿಕ್ಕ ಜೆಟ್‌ನಿಂದ ದೊಡ್ಡ ಜೆಟ್‌ವರೆಗೂ ಸ್ಪ್ರಿಂಕ್ಲರ್ ಅಳವಡಿಸಿಕೊಳ್ಳಬಹುದು ಎಂದು ಮಾಹಿತಿ ನೀಡಿದರು. ಎಲ್ಲಕ್ಕಿಂತ ಮುಖ್ಯವಾಗಿ ಸುಮಾರು 5 ಕಿಮೀ ಉದ್ದದ ಲೋಹಿಯಾ ಹಾಗೂ ಹೆಚ್.ಡಿ.ಪಿ.ಇ. ಪೈಪ್‌ಲೈನ್ ಜಾಲದ ಮೂಲಕ ನೀರನ್ನು ವಿತರಿಸಲಾಗುತ್ತದೆ ಎಂದು ವಿವರಿಸಿದರು. ಸಂಸ್ಥೆಯ ಪಿಆರ್‌ಒ ಹಿರೇಮಗಳೂರು ಪುಟ್ಟಸ್ವಾಮಿ ಇದ್ದರು.

## ಅಪರಿಚಿತ ವ್ಯಕ್ತಿ ಪತ್ತೆಗೆ ಸಹಕರಿಸಿ

ಹಾಸನ : ಅರಸೀಕೆರೆ ರೈಲು ನಿಲ್ದಾಣದ ವೇದಿಕೆ ನಂಬರ್ 02 ರಲ್ಲಿ ಸುಮಾರು 55-60 ವರ್ಷದ ಅಪರಿಚಿತ ವ್ಯಕ್ತಿ ಶವ ಪತ್ತೆಯಾಗಿದ್ದು ಅರಸೀಕೆರೆ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

5.6 ಅಡಿ ಎತ್ತರ, ಸಾದಾರಣ ಮೈ ಕಟ್ಟು, ಎಣ್ಣೆಗೆಂಪು ಮೈಬಣ್ಣ, ದುಂಡು ಮೂಖ, ದಪ್ಪ ಮೂಗು, ಮುಂದಲೆಯಿಂದ ನೆತ್ತಿವರೆಗೆ ಕೂದಲು ಉದುರಿದ್ದು ಉಳಿದ ಕಡೆ ಸುಮಾರು ಮೂರು ಇಂಚು ಉದ್ದದ ಬಿಳಿ ಕೂದಲು, ಕಪ್ಪು ಬಿಳಿ ಮಿಶ್ರಿತ ಗಡ್ಡ ಮೀಸೆ ಬಿಟ್ಟುರುತ್ತಾನೆ, ಬಲ ಕೆನ್ನೆಯಲ್ಲಿ ನರುಳ್ಳಿ ಇರುತ್ತದೆ, ಡ್ರಿಪ್ಸ್ ಸೂಜಿ ಇರುತ್ತದೆ, ಎಡಕಾಲಿನ ಪಾದದಿಂದ ಮೀನಿನ ಕಂಡದ ವರೆಗೆ ಬ್ಯಾಂಡೇಜ್ ಸುತ್ತಿದ್ದು ಮೊಣಕಾಲಿನಿಂದ ಬೆರಳುಗಳ ವರೆಗೆ ಗ್ಯಾಂಗ್ರಿನ್ ಆದಂತೆ ಕಂಡು ಬಂದಿರುತ್ತದೆ, ನೀಲಿ, ಹಳದಿ ಮತ್ತು ಬಿಳಿ ಚೆಕ್ಸ್ ಇರುವ ರೆಡಿಮೇಡ್ ಶರ್ಟ್, ನೀಲಿ ಬಣ್ಣದ ನೈಟ್ ಪ್ಯಾಂಟ್, ಪಾಚಿ ಹಸಿರು ಬಣ್ಣದ ಕಾಚ ಧರಿಸಿರುತ್ತಾನೆ.

ಈ ಚಹರೆಯುಳ್ಳ ವ್ಯಕ್ತಿಯ ವಾರಸುದಾರರು ಪತ್ತೆಯಾದಲ್ಲಿ ಅರಸೀಕೆರೆ ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 08174-232244, ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ :080-22871291 ಗೆ ಸಂಪರ್ಕಿಸಬಹುದು ಎಂದು ರೈಲ್ವೆ ಪೊಲೀಸ್ ಠಾಣೆ ಆರಕ್ಷಕ ಉಪ ನಿರೀಕ್ಷಕರು ತಿಳಿಸಿದ್ದಾರೆ.

## ಮಗುವಿಗೆ ಆರ್ಥಿಕ ನೆರವು ನೀಡಲು ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಮಂಡ್ಯ ಮೂಲದ ಎರಡು ವರ್ಷದ ಬಾಲಕ ಸ್ಪೈನಲ್ ಮಸ್ಕ್ಯುಲರ್ ಅಟ್ರೋಪಿ(ಎಸ್‌ಎಂಎ) ಟೈಪ್-2 ಎಂಬ ವಿಚಿತ್ರ ಕಾಯಿಲೆಯಿಂದ ಬಳಲುತ್ತಿದ್ದು, ಇದರ ಚಿಕಿತ್ಸೆಗೆ 2 ಕೋಟಿ ಅಗತ್ಯವಿದೆ. ದಾನಿಗಳು ನೆರವು ನೀಡುವ ಮೂಲಕ ಬಾಲಕನನ್ನು ಉಳಿಸಬೇಕೆಂದು ಫೈಯಾಜ್ ಮನವಿ ಮಾಡಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದಲ್ಲಿ ಇಂಜೆಕ್ಷನ್‌ಗೆ 16 ಕೋಟಿ ವ್ಯಯಿಸಬೇಕಿದೆ. ಆದರೆ ಇಂಡೋನೇಷ್ಯಾದಲ್ಲಿ 2 ಕೋಟಿಗೆ ಸಿಗಲಿದೆ ಎಂದಿದ್ದಾರೆ.

ನಾವು ಈಗಾಗಲೇ 1 ಕೋಟಿ ರೂ. ಹೊಂದಿದ್ದು, ಮತ್ತೊಂದು ಕೋಟಿ ಅಗತ್ಯವಿದ್ದು, ಉದಾರಿಗಳು ನೆರವು ನೀಡುವ ಮೂಖಕ ಬಾಲಕನ ಜೀವ ಉಳಿಸಬೇಕೆಂದು ಮನವಿ ಮಾಡಿದರು.

ನಾವು ಹಾಸನದಲ್ಲೂ ಫಂಡ್‌ಗಾಗಿ ಮನವಿ ಮಾಡಿದಾಗ, ಕೆಲವರು ನೆಗೆಟಿವ್ ಕಾಮೆಂಟ್ ಮಾಡಿದ್ದು ಬೇಸರ ತರಿಸಿದೆ ಎಂದರು.

ಮುಂದಿನ ಜೂ.6ಕ್ಕೆ ವೆಸಿನೋ ಜಿನ್ ಎಂಬ ಇಂಜೆಕ್ಷನ್ ಕೊಡಬೇಕಿದೆ. ಇಲ್ಲದಿದ್ದರ ಡೋಸ್ ಪ್ರಮಾಣ ಹೆಚ್ಚಿ, ಖರ್ಚು ಸಹ ಜಾಸ್ತಿ ಆಗಲಿದೆ. ಈಗಾಗಲೇ ಫಿಸಿಯೋಥರೆಫಿ ಸೇರಿ ಮಾಸಿಕ 60-70 ಸಾವಿರ ಖರ್ಚಾಗುತ್ತಿದೆ ಎಂದು ವಿವರಿಸಿದರು.

ಮಗುವಿನ ತಂದೆ ಚೇತನ್ ಸಿ ಮಾತನಾಡಿ, ನಾವು ಸುತ್ತದ ದೇವಾಲಯಗಳಿಲ್ಲ, ಆಸ್ಪತ್ರೆಯಲ್ಲಿಲ್ಲ. ತಂದೆಯವರೂ ಸರ್ಕಾರಿ ಕಚೇರಿ, ಡಿಸಿ ಕಚೇರಿ ಹಾಗೂ ಸರ್ಕಾರದ ಪ್ರತಿನಿಧಿಗಳನ್ನು ನಿತ್ಯವೂ ಭೇಟಿ ಮಾಡುತ್ತಿದ್ದಾರೆ. ಆದರೆ ಯಾರ ಕಡೆಯಿಂದಲೂ ಪ್ರಯೋಜನ ಆಗಿಲ್ಲ ಎಂದು ಅಳಲು ತೋಡಿಕೊಂಡರು. ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಸರ್ಕಾರ ಮುತುವರ್ಜಿ ತಕೋಬೇಕು, ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೂ ಮನವಿ ಮಾಡಿದ್ದೇವೆ ಎಂದರು.

ಆಸಕ್ತರು: Name: SAI CHIRAG U/G CHETHAN C, Ac: 50100861688698, IFSC code : HDFC0002377

Branch: WHITEFIELD BANGALORE, Bank : HDFC

ಹೆಚ್ಚಿನ ಮಾಹಿತಿಗಾಗಿ 8867777771, 9743393397, 8142497703

ಈ ನಂಬರ್ ಸಂಪರ್ಕಿಸುವಂತೆ ಕೋರಿದರು. ಸುದ್ದಿತೋಷ್ಠಿಯಲ್ಲಿ ಬಾಲಕನ ಜೊತೆ ತಾಯಿ ಸಾಯಿ ಭಾರ್ಗವಿ, ಶರವಂತ್, ಮಹಮ್ಮದ್, ಮಹಮದ್ ಬಿಲಾಲ್ ಇದ್ದರು.

# ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ

## ಮತಗಟ್ಟೆಗೆ ಏಜೆಂಟ್ ನೇಮಕಕ್ಕೆ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯು ನಡೆಯುತ್ತಿದ್ದು, ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಹಾಗೂ ಪ್ರತಿನಿಧಿಗಳು ಹೆಚ್ಚಿನ ಗಮನಹರಿಸಿ ಬೂತ್ ಮಟ್ಟದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಗೆ ಸಹಕಾರಿಯಾಗುವಂತೆ ಪ್ರತಿ ಬೂತ್‌ಗೆ ಏಜೆಂಟ್ ನೇಮಕ ಮಾಡುವಂತೆ ಹಾಗೂ ಚುನಾವಣಾ ಸಹಾಯವಾಣಿ ಸಂಖ್ಯೆ 1950 ಜೂನ್ 1 ರಿಂದ ಕಾರ್ಯನಿರ್ವಹಿಸಲಿದೆ ಇದರ ಸಹಾಯ ಪಡೆಯುವಂತೆ ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿಂದು ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಕುರಿತು ವಿವಿಧ ರಾಜಕೀಯ ಪಕ್ಷಗಳ ನಾಯಕರು ಹಾಗೂ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು ಭಾರತ ಚುನಾವಣಾ ಆಯೋಗವು ಲೋಕಸಭಾ ಮತ್ತು ವಿಧಾನಸಭಾ ಚುನಾವಣೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ ವಿಶೇಷ ಸಮಗ್ರ ಮತದಾರರ ಪರಿಷ್ಕರಣೆ ಪಟ್ಟಿ ತಯಾರಿಸುವ ಪ್ರಕ್ರಿಯೆ ನಡೆಸುತ್ತಿದೆ ಈ ನಿಟ್ಟಿನಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಪ್ರತಿ ಬೂತ್ ಗೆ ಮತದಾರರ ಏಜೆಂಟ್ ನೇಮಕ ಮಾಡಿ ಅದರ ಪಟ್ಟಿ ನೀಡುವ ಮೂಲಕ ಆರೋಗ್ಯಕರ




ಮತದಾರರ ಪಟ್ಟಿ ತಯಾರಿಸಲು ಸಹಕಾರ ನೀಡುವಂತೆ ತಿಳಿಸಿದರಲ್ಲದೆ ಯಾವುದೇ ಪ್ರಜೆಯು ಮತದಾನದಿಂದ ವಂಚಿತರಾಗದಂತೆ ಗಮನಹರಿಸಬೇಕು ಎಂದು ತಿಳಿಸಿದರು.

ಪ್ರಜಾ ಪ್ರಾತಿನಿಧ್ಯ ಕಾಯ್ದೆ ಅಡಿಯಲ್ಲಿ ಮತದಾರರ ಪಟ್ಟಿ ತಯಾರಿಸುವುದು ಸಂವಿಧಾನಾತ್ಮಕ ಕರ್ತವ್ಯ ಈ ನಿಟ್ಟಿನಲ್ಲಿ ದೇಶದಾದ್ಯಂತ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ರಮ ನಡೆಯುತ್ತಿದ್ದು, 2025ರ ಮತದಾರರ ಪಟ್ಟಿಯಲ್ಲಿರುವ ಹೆಸರುಗಳಿಗೆ ಸಂಬಂಧಿಸಿದಂತೆ 2002 ರಲ್ಲಿರುವ ಮತದಾರರ ಪಟ್ಟಿಯ ಮತದಾರರ ಕುಟುಂಬದ ಸಂತತಿಗಳಾಗಿ ಮ್ಯಾಪಿಂಗ್ ಮಾಡಿ ಲಿಂಕ್ ಮಾಡಲಾಗುತ್ತಿದ್ದು, ಈಗಾಗಲೇ ಶೇ.91 ರಷ್ಟು ಆಗಿದ್ದು, ಮ್ಯಾಪಿಂಗ್ ಕಾರ್ಯ ಮುಂದುವರೆದಿದೆ ಜೂನ್ 16 ವರೆಗೆ ನಡೆಯಲಿದೆ ಎಂದು ತಿಳಿಸಿದರು.

ಮ್ಯಾಪಿಂಗ್ ನಲ್ಲಿ ಸಿಗದೆ ಇರುವವರಿಗೆ ಬೂತ್ ಮಟ್ಟದ ಅಧಿಕಾರಿಗಳು ನೋಟಿಸ್ ನೀಡಿ ನೋಂದಣಿ ಫಾರಂ ನೀಡುತ್ತಾರೆ ಅದನ್ನು ಭರ್ತಿ ಮಾಡಿ ನೀಡಿದ ನಂತರ ಹೆಸರು ಮತ್ತು ಫೋಟೋ ತಾಳೆಯಾಗುತ್ತಿರುವುದನ್ನು ಪರಿಶೀಲನೆ ಮಾಡಿ ಎರಡು ಕಡೆ ಹೆಸರು ಇದ್ದಲ್ಲಿ ಯಾವ ಸ್ಥಳದಲ್ಲಿ ಬೇಕು ಎಂದು ಒಪ್ಪಿಗೆ ನೀಡಿದ ನಂತರ ನಿಯಮಾನುಸಾರ ಒಂದು ಕಡೆ ಮತದಾರರ ಪಟ್ಟಿಯಲ್ಲಿ ಹೆಸರು ಡಿಲೀಟ್ ಮಾಡಲಾಗುವುದು ಎಂದು ತಿಳಿಸಿದರು.

ಜೂನ್ 30 ರಿಂದ ಜುಲೈ 29 ವರೆಗೆ ಬಿ.ಎಲ್.ಓ ಗಳು ಮನೆ ಮನೆಗೆ ಭೇಟಿ ನೀಡಿ ತಮ್ಮ ಹೆಸರು ಮತ್ತಿತರ ಮಾಹಿತಿ ದಾಖಲಾಗಿರುವ ನಮೂನೆಯನ್ನು ದ್ವಿ ಪ್ರತಿಯಲ್ಲಿ ನೀಡುತ್ತಾರೆ ಅದನ್ನು ಮತದಾರರು ಒಮ್ಮೆ ಓದಿ ಸರಿಯಿದೆ ಎಂದು ಪರಿಶೀಲಿಸಿ ಸಹಿ ಮಾಡಿ ನೀಡಿದ ಪ್ರತಿಯನ್ನು ಆನ್ ಲೈನ್ ನಲ್ಲಿ ಅಪ್ಲೋಡ್ ಮಾಡಲಾಗುವುದು ಎಂದು ತಿಳಿಸಿದರು.

ಪೂರ್ವ ತಯಾರಿಗಾಗಿ ಮತಗಟ್ಟೆ ಅಧಿಕಾರಿಗಳು ಹಾಗೂ ಮತಗಟ್ಟೆ ಏಜೆಂಟ್‌ಗಳಿಗೆ ತರಬೇತಿ ನೀಡಲಾಗುವುದು ಎಂದು ತಿಳಿಸಿದ ಅವರು ಮತಗಟ್ಟೆ ಅಧಿಕಾರಿಗಳು ನಿವೃತ್ತಿ ಅಥವಾ ವರ್ಗಾವಣೆ ಆಗಿದ್ದಲ್ಲಿ ಬೇರೆಯವರನ್ನು ನೇಮಕ ಮಾಡಲು ಕ್ರಮವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಮತಗಟ್ಟೆ ಅಧಿಕಾರಿಗಳ ಹೆಸರು ಫೋನ್ ನಂಬರ್‌ಗಳನ್ನು ಎಲ್ಲಾ ರಾಜಕೀಯ ಪಕ್ಷಗಳು ನಾಯಕರು ಹಾಗೂ ಪ್ರತಿನಿಧಿಗಳಿಗೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ವಿಶೇಷ ಸಮಗ್ರ ಪರಿಷ್ಕರಣೆಗ ಅರ್ಹತಾ ದಿನಾಂಕ 01.10.2026, ಪೂರ್ವ ತಯಾರಿ, ತರಬೇತಿ ಮತ್ತು ಮುದ್ರಣ ಜೂನ್ 26 ರಿಂದ 29, ಆಗಸ್ಟ್ 5 ರಂದು ಕರಡು ಪ್ರತಿ ಪ್ರಕಟಣೆ ಮಾಡಲಾಗುವುದು ಆಕ್ಷೇಪಣೆ ಸಲ್ಲಿಸಲು ಆ.5 ರಿಂದ ಸೆಪ್ಟೆಂಬರ್ 4 ವರೆಗೆ ಅವಕಾಶ ಇರುತ್ತದೆ ಆಕ್ಷೇಪಣೆ ತಿರುವಳಿ ಆಗಸ್ಟ್ 5 ರಿಂದ ಅಕ್ಟೋಬರ್ 3 ರವರೆಗೆ, ಅಂತಿಮ ಮತದಾರರ ಪಟ್ಟಿ ದಿನಾಂಕ 7.10.2026 ರಂದು ಪ್ರಕಟ ಮಾಡಲಾವುದು ಎಂದು ಹೇಳಿದರು.

ಜೋಡಣೆ ಮಾಡದೇ ಇರುವ ಮತದಾರರು ಆಯೋಗವು ನಿಗದಿಪಡಿಸಿರುವ 12 ವಿವಿಧ ದಾಖಲೆಗಳಲ್ಲಿ ಒಂದು ದಾಖಲೆ ನೀಡಿ ಮತದಾರರ ಪಟ್ಟಿಗೆ ಹೆಸರು ಸೇರಿಸಲು ಹೊಸ ಅರ್ಜಿ ನೀಡಬಹುದು ಎಂದು ತಿಳಿಸಿದರು.

ವರ್ಷದಲ್ಲಿ ನಾಲ್ಕು ಬಾರಿ ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ 1 ರಂದು ಮತದಾರರ ಪಟ್ಟಿ ಪರಿಷ್ಕರಣೆ ಆಗುತ್ತದೆ ಆ ಸಂದರ್ಭದಲ್ಲಿ 18 ವರ್ಷ ಪೂರೈಸಿದವರು ಹೊಸ ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷದ ಪ್ರತಿನಿಧಿ ರಘು, ಜೆ.ಡಿ.ಎಸ್.ಪಕ್ಷದಿಂದ ಕೆ.ಎಸ್. ಲಿಂಗೇಶ್, ಎಸ್ .ದ್ಯಾವೇಗೌಡ, ಭಾರತೀಯ ಜನತಾ ಪಕ್ಷದ ಅಮಿತ್ ಶೆಟ್ಟಿ, ಆಮ್ ಆದ್ಮಿ ಪಕ್ಷದ ಯೋಗೇಶ್ ಕಮ್ಯುನಿಸ್ಟ್ ಪಕ್ಷದಿಂದ ನವೀನ್ ಕುಮಾರ್ ಸಭೆಯಲ್ಲಿ ಹಾಜರಿದ್ದರು.

# ಒಪ್ಪಂದ ಪದ್ಧತಿ ಕೋಳಿ ಸಾಕಾಣಿಕೆ

## ಕನಿಷ್ಠ 10 ರೂ. ದರ ನಿಗದಿಪಡಿಸಿದ ಸರ್ಕಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಒಪ್ಪಂದ ಪದ್ಧತಿಯಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿರುವ ರಾಜ್ಯದ ರೈತರಿಗೆ ಇನ್ನು ಮುಂದೆ ತಾತ್ಕಾಲಿಕವಾಗಿ ಕನಿಷ್ಠ 10 ರೂ ಸಾಕಾಣೆ ದರ ನಿಗದಿ ಮಾಡಿ ಸರ್ಕಾರ ಆದೇಶ ಮಾಡಿದೆ ಎಂದು ಅಖಿಲ ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ತಿಳಿಸಿದ್ದಾರೆ

ಪತ್ರಿಕೆ ಹೇಳಿಕೆ ನೀಡಿರುವ ಅವರು ಮುಂದಿನ ದಿನದಲ್ಲಿ ಕೋಳಿ ಸಾಕಣೆಗೆ ತಗಲುವ ಒಟ್ಟಾರೆ ವೆಚ್ಚದ ಆಧಾರದ ಮೇಲೆ ತಾಂತ್ರಿಕ ನಿರ್ವಹಣಾ ಸಮಿತಿಯನ್ನು ರಚಿಸಲಾಗಿದೆ.

ಈ ಹಿಂದೆ ಕೋಳಿ ಸಾಕಾಣಿಕೆದಾರರಿಗೆ ಮಾರಾಟ ಕಂಪನಿಗಳು 6.25 ಪೈಸೆ ಕೊಟ್ಟು ಖರೀದಿಸುತ್ತಿದ್ದವು ಆದರೆ ಇದರಿಂದ ರೈತರಿಗೆ ನಷ್ಟ ಉಂಟಾಗುತ್ತಿದ್ದು. ಕೆಜಿಗೆ 20 ರೂ ಧರ ನಿಗದಿ ಮಾಡಬೇಕೆಂದು ರಾಜ್ಯ ಪಶುಪಾಲನ ಆಯುಕ್ತರಿಗೆ ಮನವಿ ಮಾಡಲಾಗಿತ್ತು

ರೈತರ ಮನವಿಗೆ ಸ್ಪಂದಿಸಿದ ಪಶು ಸಂಗೋಪನೆ ಇಲಾಖೆ ಆಯುಕ್ತರು ಆದ ಶಿಲ್ಪನಾಗ್ ಹಾಗೂ ಇತರೆ ಅಧಿಕಾರಿಗಳ ತಂಡ ಅಖಿಲ ಕರ್ನಾಟಕ ಕೋಳಿ ಸಾಕಾಣಿಕೆ ರೈತರ ಸಂಘ ಮತ್ತು ಕೋಳಿ ಮಾರಾಟ ಕಂಪನಿಗಳ ನೇತೃತ್ವದಲ್ಲಿ ಸಭೆ ನಡೆಸಿ ಅಹವಾಲು ಸ್ವೀಕರಿಸಿದರು

ರೈತರು ಮತ್ತು ಕಂಪನಿಗಳು. ಅಧಿಕಾರಿ ಒಳಗೊಂಡಂತೆ ತಾಂತ್ರಿಕ ನಿರ್ವಹಣಾ ಸಮಿತಿಯನ್ನು ರಚನೆ ಮಾಡಿದ್ದು. ಈ ಸಮಿತಿ ವರದಿ ಬರುವವರೆಗೂ ಕೋಳಿ ಮಾರಾಟ ಕಂಪನಿಗಳು ರೈತರಿಗೆ ತಾತ್ಕಾಲಿಕವಾಗಿ ಕನಿಷ್ಠ 10 ರು ನೀಡಬೇಕೆಂದು ಸರ್ಕಾರ ಆದೇಶ ಮಾಡಲಾಗಿದೆ ಎಂದು ತಿಳಿಸಿದ್ದಾರೆ

ರಾಜ್ಯ ಕೋಳಿ ಸಾಕಾಣಿಕೆ ಸಂಘ ಕಳೆದ ಐದು ತಿಂಗಳಿಂದ ನಿರಂತರ ಹೋರಾಟಕ್ಕೆ ಜಯ ಸಿಕ್ಕಿದ್ದು. ಕೋಳಿ ಬೆಳಗಾರರಿಗೆ ವೈಜ್ಞಾನಿಕ ರೀತಿಯಲ್ಲಿ ಸ್ವಾಮಿನಾಥನ್ ಆಯೋಗದ ಪ್ರಕಾರ ಲಾಭಾಂಶ ಸೇರಿಸಿ ಬೆಲೆ ನಿಗದಿಯಾಗಬೇಕು ಹಾಗೂ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ 25 ಲಕ್ಷ ಸಾಲ ಹಾಗೂ ಸಹಾಯಧನ ಸೌಲಭ್ಯವನ್ನು ಜಾರಿಗೊಳಿಸುವವರೆಗೂ ಹೋರಾಟ ಮುಂದುವರಿಸುವುದಾಗಿ ತಿಳಿಸಿದ್ದಾರೆ

# ತಾಲ್ಲೂಕು ಮಟ್ಟದಲ್ಲಿ ಕೌಶಲ್ಯ ಸಮಿತಿ ಸಭೆ ನಡೆಸಲು ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಜಿಲ್ಲೆಯ ಎಲ್ಲಾ ತಾಲ್ಲೂಕು ಮಟ್ಟದಲ್ಲಿ ಕೌಶಲ್ಯ ಸಮಿತಿ ಸಭೆಯನ್ನು ಮುಂದಿನ ಜುಲೈ 27 ಕ್ಕೆ ನಡೆಯುವ ಜಿಲ್ಲಾ ಮಟ್ಟದ ಸಭೆಯೊಳಗೆ ತಾಲ್ಲೂಕುಗಳಲ್ಲಿ ಸಭೆ ಆಗಬೇಕು ಎಂದು ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಜಿಲ್ಲಾ ಕೌಶಲ್ಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು ಸಮಿತಿಯ ಉದ್ದೇಶ ಮತ್ತು ಕಾರ್ಯಗಳ ಬಗ್ಗೆ ತಿಳುವಳಿಕೆ ನೀಡಬೇಕು ಎಂದು ತಿಳಿಸಿದರು.

ಜಿಲ್ಲಾ ಮಟ್ಟದಲ್ಲಿ ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕು ಇದುವರೆಗೆ ಒಂದು ಸಭೆ ಮಾಡಿಲ್ಲ ಏಕೆ ಎಂದು ಪ್ರಶ್ನಿಸಿದರು ಏನೇನು ಕಾರ್ಯಕ್ರಮ ನಿರೂಪಿಸಿದ್ದೀರಿ

ಯಾವ ಯಾವ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ ಎಂಬುವುದರ ಬಗ್ಗೆ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸರ್ಕಾರದ ಮತ್ತು ಖಾಸಗಿ




ತರಬೇತಿ ಕೇಂದ್ರಗಳ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿದರಲ್ಲದೆ, ಸರ್ಕಾರದ ಯೋಜನೆಗಳ ಮಾಹಿತಿ ಕೂಡ ಸಂಕಲ್ಪ ಯೋಜನೆಯಡಿ ವೃತ್ತಿ ತರಬೇತಿಯಲ್ಲಿ ಪ್ರಮಾಣೀಕೃತ ಅರ್ಹ ಫಲಾನುಭವಿಗಳಿಗೆ ಟೂಲ್ ಕಿಟ್ ವಿತರಣೆಗೆ ಕ್ರಮ ವಹಿಸಲು ಸೂಚನೆ ನೀಡಿದರು.

ಜಿಲ್ಲೆಯಲ್ಲಿ ತಾಲ್ಲೂಕುವಾರು ಎಷ್ಟು ಪದವಿ ಕಾಲೇಜುಗಳಿವೆ ಪ್ರತಿ ವರ್ಷ ಪದವಿ ಮುಗಿಸಿ ಎಷ್ಟು ವಿದ್ಯಾರ್ಥಿಗಳು ಹೊರ ಬರುತ್ತಿದ್ದಾರೆ ಎಂಬ ಮಾಹಿತಿ ಹಾಗೂ ಜಿಲ್ಲೆಯಲ್ಲಿ ಎಷ್ಟು ಫಲಾನುಭವಿಗಳು ಯುವನಿಧಿ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ ಎಂಬ ಮಾಹಿತಿ ಒದಗಿಸುವಂತೆ ಸೂಚನೆ ನೀಡಿದರು.

ತರಬೇತಿ ಸಂಸ್ಥೆಗಳನ್ನು ಬಳಸಿಕೊಂಡು ಯುವ ಜನತೆಗೆ ಪರಿಣಾಮಕಾರಿ ಯಾಗಿ ತರಬೇತಿ ನೀಡುವ ಮೂಲಕ ಕೌಶಲ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ತಿಳಿಸಿದರು.

ಯುವನಿಧಿ ಯೋಜನೆಯಡಿ ನೋಂದಣಿ ಮಾಡಿಕೊಂಡಿರುವ ಫಲಾನುಭವಿಗಳು ಕೌಶಲ್ಯ ತರಬೇತಿ ಪಡೆಯಲು ಅರಿವು ಮೂಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ವಂದೇ ಭಾರತ್ ಎಕ್ಸ್ ಪ್ರೆಸ್ ರೈಲ್ವೆ ಪ್ರಾಜೆಕ್ಟ್ ಅಡಿಯಲ್ಲಿ ನಡೆಯುತ್ತಿರುವ 66 ಕೆ.ವಿ.ವಿದ್ಯುತ್ ಮಾರ್ಗದಡಿಯಲ್ಲಿ ಬರುವ ಟವರ್/ ಕಾರಿಡಾರ್ ಕಾಮಗಾರಿಯು ಕಂದಲಿಯ ಯಗಚಿ ವಿದ್ಯಾಪೀಠದ ಮೂಲಕ ಹಾದು ಹೋಗಿದ್ದು, ಕೌಶಲ್ಯಾಭಿವೃದ್ಧಿ ಇಲಾಖೆಗೆ ಸೇರಿದೆ ಭೂ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಕಾರಾಗೃಹದಲ್ಲಿ ದಾಖಲಿರುವ ಬಂದಿಗಳಿಗೆ ಆನ್ ಲೈನ್ ಮೂಲಕ ಪಶು ಸಂಗೋಪನೆ, ಕುರಿ ಕೋಳಿ ಸಾಕಾಣಿಕೆ, ಅಣಬೆ ಬೇಸಾಯ ಕುರಿತು ತರಬೇತಿ ನೀಡಲು ಕ್ರಮ ವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯ ಪ್ರೌಢ ಶಾಲೆ ಮತ್ತು ಪಿ.ಯು.ಸಿ. ವಿದ್ಯಾರ್ಥಿ ಗಳಿಗೆ ನನ್ನ ವೃತ್ತಿ ನನ್ನ ಆಯ್ಕೆ ಯೋಜನೆಯಡಿ ಶಾಲೆಗಳಲ್ಲಿ ಜಾಗೃತಿ ಮೂಡಿಸಲು ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಬಾಬು, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ವಿಜಯಲಕ್ಷ್ಮಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

# ಪರಿಸರದಲ್ಲಿ ಮೊಳಗಿದ ಮುಂಗಾರು ಕವಿಗೋಷ್ಠಿಯ ಕಾವ್ಯಧಾರೆ

## ಮಾದಕ ಮುಕ್ತ ಸಮಾಜಕ್ಕೆ ಕವಿಮನಗಳ ಸಾಹಿತ್ಯದ ಸಿಂಚನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ : ಮುಂಗಾರಿನ ತಂಪು ಗಾಳಿ, ಮಲೆನಾಡಿನ ಪ್ರಶಾಂತ ವಾತಾವರಣ, ಸಾಕ್ಷಿಯಾಗಿ ನಿಂತ ನಾಡಪ್ರಭು ಕೆಂಪೇಗೌಡರ ಪ್ರತಿಮೆ... ಇಂತಹದೊಂದು ರಮ್ಯ ಸಂಜೆಯ ಮಂದ ಬೆಳಕಿನಲ್ಲಿ ಸಕಲೇಶಪುರದ ಕವಿಹೃದಯಗಳು ಕಾವ್ಯದ ಇಂಪನ್ನು ಹರಿಸಿದವು.

'ಡ್ರಗ್ಸ್ ಮುಕ್ತ ಸಕಲೇಶಪುರ' ಆಂದೋಲನದ ಆಶ್ರಯದಲ್ಲಿ ಆಯೋಜನೆಗೊಂಡಿದ್ದ 'ಮುಂಗಾರು ಕವಿಗೋಷ್ಠಿ'ಯು ಕೇವಲ ಸಾಹಿತ್ಯದ ಸಂಜೆಯಾಗದೆ, ಸಮಾಜವನ್ನು ಕಾಡುತ್ತಿರುವ ಮಾದಕ ವಸ್ತುವಿನ ಪಿಡುಗಿನ ವಿರುದ್ಧ ಜಾಗೃತಿಯನ್ನು ಮೂಡಿಸುವ ಶಕ್ತಿಯುತ ಕಾವ್ಯಧಾರೆಯಾಗಿ ಮಾರ್ಪಟ್ಟಿತ್ತು.

ಕಾವ್ಯಲೋಕದಲ್ಲಿ ತೇಲಿಸಿದ ಕವಿಗಳು:

ಈ ಭಾವನಾತ್ಮಕ ಕಾವ್ಯ ಸಂಜೆಯಲ್ಲಿನ ಕವಿಗಳಾದ ಕೀರ್ತಿ ಕಿರಣ್, ಪುಷ್ಪಾ ಲಕ್ಷ್ಮಣ್, ಪ್ರಜ್ವಲ್, ಡಯಾನಾ ಡಿಸೋಜ, , ಮಲ್ಲೇಶ್,



### ಮಲೆನಾಡ ಮುಂಗಾರಿನ ಸವಿರುಚಿ... ಕಾವ್ಯದ ಹೂರಣ!

ಊರ ಹೊರವಲಯದ ನಿಶ್ಯಬ್ದ ಪರಿಸರ, ಮಲೆನಾಡಿನ ಸುಂದರ, ಪ್ರಶಾಂತ ಹಾಗೂ ತಣ್ಣಗಿನ ವಾತಾವರಣದ ನಡುವೆ ಮಂದ ಬೆಳಕಿನಲ್ಲಿ ಮೂಡಿಬಂದ ಈ ಕವಿಗೋಷ್ಠಿ ಪ್ರತಿಯೊಬ್ಬರ ಮನಸ್ಸಿಗೆ ಹಿತ ನೀಡಿತು.

ಒಂದು ಕಡೆ ಕವಿಗಳ ಆತ್ಮೀಯ ಸಂವಹನ, ಭಾವನಾತ್ಮಕ ಕವನಗಳ ಸುರಿಮಳೆಯಾಗುತ್ತಿದ್ದರೆ, ಮತ್ತೊಂದೆಡೆ ಬಿಸಿಬಿಸಿ ಪಕೋಡ, ಜಿಲೇಬಿ, ಬಾಳೆಹಣ್ಣು ಮತ್ತು ಉಪ್ಪಿನಲ್ಲಿ ನೆನೆಸಿದ ಮಿಡಿ ಮಾವಿನಕಾಯಿಯ ಸವಿರುಚಿ ನೆರೆದಿದ್ದವರ ನಾಲಿಗೆಯನ್ನು ತಣಿಸುತ್ತಿತ್ತು.

ಇದರ ಜೊತೆಗೆ ಮಲೆನಾಡಿನ ಬೆಚ್ಚಗಿನ ಕಾಫಿಯ ಸಿಪ್ ಸವಿಯುತ್ತಾ ಕಾವ್ಯ ಆಲಿಸಿದ ಆ ಕ್ಷಣಗಳು ಕಾವ್ಯಪ್ರೇಮಿಗಳ ಮನಸ್ಸಿನಲ್ಲಿ ದೀರ್ಘಕಾಲ ಹಚ್ಚಹಸಿರಾಗಿ ಉಳಿಯುವಂತಿದ್ದವು.

ಜ್ಯೋತಿ, ತಾಸೀನಾ ರಜಾಕ್, ಯಾಸ್ಮಿನ್ ರಿಯಾಜ್ ಮಲ್ನಾಡ್ ಮೆಹಬೂಬ್ ಸಾಯಿರ ಬಾನು ಅವರು ತಮ್ಮ ಮನೋಜ್ಞ ಕವನಗಳ ಮೂಲಕ ಕಾವ್ಯಲೋಕದಲ್ಲಿ ತೇಲಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಮಾಜಿ ಶಾಸಕ ಎಚ್. ಎಂ. ವಿಶ್ವನಾಥ್ ಅವರು, ಇಂದಿನ ಯುವ ಪೀಳಿಗೆಯನ್ನು ತಪ್ಪು ಹಾದಿಗೆ ಎಳೆಯುತ್ತಿರುವ ಮಾದಕ ವಸ್ತುಗಳ ವ್ಯಸನದ ವಿರುದ್ಧ ಇಂತಹ ಸಾಂಸ್ಕೃತಿಕ ಆಂದೋಲನಗಳು ನಿರಂತರವಾಗಿ ನಡೆಯಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಸಕಲೇಶಪುರವನ್ನು ಸಂಪೂರ್ಣವಾಗಿ ಡ್ರಗ್ಸ್ ಮುಕ್ತ ತಾಲ್ಲೂಕನ್ನಾಗಿ ಮಾಡಲು ಪ್ರತಿಯೊಬ್ಬ ನಾಗರಿಕನೂ ಜವಾಬ್ದಾರಿಯಿಂದ ಕೈಜೋಡಿಸಬೇಕಾದ ಅನಿವಾರ್ಯತೆ ಇದೆ ಎಂದು ಕರೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಜೈ ಮಾರುತಿ ದೇವರಾಜ್ ಅವರು ಅಕ್ಷರ ಕೃಷಿ ಮಾಡಿದ ಕವಿಗಳಿಗೆ ನೆನಪಿನ ಕಿರು ಕಾಣಿಕೆ ನೀಡಿ ಗೌರವಿಸಿದರು. ಆರಂಭದಲ್ಲಿ ಪತ್ರಕರ್ತ ಅಕ್ಬರ್ ಅವರು ತಮ್ಮ ಆಕರ್ಷಕ ನುಡಿಗಳ ಮೂಲಕ ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿದರು.

# ಇಂದಿನ ಪೀಳಿಗೆಗೆ ಬೇಕಾದ ಶಿಕ್ಷಕರು

## ಪಾಠ ಹೇಳುವವರಲ್ಲ, ಬದುಕು ರೂಪಿಸುವವರೇ ನಿಜವಾದ ಶಿಕ್ಷಕರು!



**- ಅಂತೋಣಿ ಮುತ್ತು ವಿ**
**ಶಿಕ್ಷಕರು, 7259675543**

ಇಂದಿನ ಜಗತ್ತು ವೇಗವಾಗಿ ಬದಲಾಗುತ್ತಿದೆ. ತಂತ್ರಜ್ಞಾನ, ಮೊಬೈಲ್,ಸಾಮಾಜಿಕ ಜಾಲತಾಣಗಳು ಮತ್ತು ಕೃತಕ ಬುದ್ಧಿಮತ್ತೆಯ ಪ್ರಭಾವದಿಂದ ಮಕ್ಕಳ ಆಲೋಚನೆಗಳು ಕೂಡ ಹೊಸ ರೂಪ ಪಡೆದುಕೊಳ್ಳುತ್ತಿವೆ.ಇಂತಹ ಸಂದರ್ಭದಲ್ಲಿ ಇಂದಿನ ಪೀಳಿಗೆಗೆ ಕೇವಲ ಪುಸ್ತಕ ಪಾಠ ಹೇಳುವ ಶಿಕ್ಷಕರು ಸಾಕಾಗುವುದಿಲ್ಲ.ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳುವ, ಪ್ರೇರಣೆ ನೀಡುವ ಮತ್ತು ಉತ್ತಮ ವ್ಯಕ್ತಿತ್ವವನ್ನು ರೂಪಿಸುವ ಶಿಕ್ಷಕರು ಅಗತ್ಯ.

ಇಂದಿನ ಮಕ್ಕಳು ಪ್ರಶ್ನಿಸುವ ಸ್ವಭಾವ ಹೊಂದಿದ್ದಾರೆ. ಅವರು ''ಏನು?'' ಎಂಬುದಕ್ಕಿಂತ ''ಯಾಕೆ?'' ಎಂದು ಕೇಳುತ್ತಾರೆ.ಆದ್ದರಿಂದ ಶಿಕ್ಷಕರು ಸಹನೆಯಿಂದ ಉತ್ತರಿಸುವವರಾಗಿರಬೇಕು. ಮಕ್ಕಳನ್ನು ಗದರಿಸುವುದಕ್ಕಿಂತ ಅವರ ಜೊತೆ ಸ್ನೇಹದಿಂದ ಮಾತನಾಡುವ ಶಿಕ್ಷಕರು ವಿದ್ಯಾರ್ಥಿಗಳ ಮನಸ್ಸನ್ನು ಗೆಲ್ಲುತ್ತಾರೆ.ಇಂದಿನ ಪೀಳಿಗೆಗೆ ಭಯ ಹುಟ್ಟಿಸುವ ಶಿಕ್ಷಕರಿಗಿಂತ ಆತ್ಮವಿಶ್ವಾಸ ತುಂಬುವ ಶಿಕ್ಷಕರು ಬೇಕು.

ಅಂಕಗಳಿಗಿಂತ ಮೌಲ್ಯಗಳಿಗೆ ಮಹತ್ವ ನೀಡುವ ಶಿಕ್ಷಕರು ಸಮಾಜಕ್ಕೆ ಅವಶ್ಯಕ.ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ಕಲಿಸುವುದರ ಜೊತೆಗೆ ಪ್ರಾಮಾಣಿಕತೆ, ಮಾನವೀಯತೆ,ದೇಶಪ್ರೇಮ ಮತ್ತು ಪರಿಸರ ಪ್ರೀತಿಯನ್ನೂ ಕಲಿಸಬೇಕು.ಒಳ್ಳೆಯ ಉದ್ಯೋಗಿಗಳನ್ನು ಮಾತ್ರವಲ್ಲ, ಒಳ್ಳೆಯ ಮನುಷ್ಯರನ್ನು ರೂಪಿಸುವುದು ಶಿಕ್ಷಕರ ನಿಜವಾದ ಕರ್ತವ್ಯ. ಇಂದಿನ ಮಕ್ಕಳಲ್ಲಿ ಅನೇಕರು ಒತ್ತಡ ಮತ್ತು ಆತಂಕದಿಂದ ಬಳಲುತ್ತಿದ್ದಾರೆ. ಅಂತಹ ಸಮಯದಲ್ಲಿ ಶಿಕ್ಷಕರು ಒಳ್ಳೆಯ ಮಾರ್ಗದರ್ಶಕರಾಗಬೇಕು. ''ನೀನು ಮಾಡಬಲ್ಲೆ'' ಎಂಬ ಶಿಕ್ಷಕರ ಒಂದು ಮಾತು ವಿದ್ಯಾರ್ಥಿಯ ಬದುಕನ್ನೇ ಬದಲಾಯಿಸಬಹುದು. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಶಿಕ್ಷಕರೇ ಈ ಪೀಳಿಗೆಯ ನಿಜವಾದ ದಾರಿದೀಪಗಳು. ಕೊನೆಯಲ್ಲಿ ಹೇಳುವುದಾದರೆ, ಇಂದಿನ ಪೀಳಿಗೆಗೆ ಬೇಕಾದ ಶಿಕ್ಷಕರು ಕೇವಲ ಪಾಠ ಹೇಳುವವರಲ್ಲ;ಅವರು ಸ್ನೇಹಿತರು,ಮಾರ್ಗದರ್ಶಕರು, ಪ್ರೇರಣಾದಾಯಕರು ಮತ್ತು ಸಮಾಜ ನಿರ್ಮಾತೃಗಳು. ಏಕೆಂದರೆ ಒಬ್ಬ ಉತ್ತಮ ಶಿಕ್ಷಕನು ಕೇವಲ ವಿದ್ಯಾರ್ಥಿಯನ್ನು ಮಾತ್ರವಲ್ಲ, ಒಂದು ದೇಶದ ಭವಿಷ್ಯವನ್ನೇ ರೂಪಿಸುವ ಶಕ್ತಿಯನ್ನು ಹೊಂದಿರುತ್ತಾನೆ.

# ಸಾರ್ವಜನಿಕರು ವಿದ್ಯುತ್ ಸಮಸ್ಯೆ ಬಗೆಹರಿಸಿಕೊಳ್ಳಲು ದೂರವಾಣಿ ಸಂಖ್ಯೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಸಕಲೇಶಪುರ ಕಾರ್ಯ ಮತ್ತು ಪಾಲನಾ ವಿಭಾಗ ವ್ಯಾಪ್ತಿಯಲ್ಲಿ ಬರುವ ಆಲೂರು, ಬೇಲೂರು ಮತ್ತು ಸಕಲೇಶಪುರ ತಾಲ್ಲೂಕುಗಳ ವ್ಯಾಪ್ತಿಯಲ್ಲಿನ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು ಮತ್ತು ಮಳೆಗಾಲದಲ್ಲಿ ಉಂಟಾಗುವ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸಲುವಾಗಿ, ಗ್ರಾಹಕರು / ಸಾರ್ವಜನಿಕರು ಕುಂದುಕೊರತೆಗಳನ್ನು ಬಗೆಹರಿಸಿಕೊಳಲು ಶಾಖಾಧಿಕಾರಿಗಳ ಮತ್ತು ಅಧಿಕಾರಿಗಳ ಮೊಬೈಲ್ ದೂರವಾಣಿ ಸಂಖ್ಯೆಗಳನ್ನು ನೀಡಲಾಗಿದೆ ಎಂದು ಸಕಲೇಶಪುರ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ತಾಲ್ಲೂಕು ಮತ್ತು ದೂರವಾಣಿ ಸಂಖ್ಯೆ :- ಗ್ರಾಹಕರ ಸೇವಾ ಕೇಂದ್ರ (ಟೋಲ್ ಫ್ರೀ ನಂಬರ್) ದೂರವಾಣಿ ಸಂಖ್ಯೆ : 19129448991912, ಆಲೂರು 24ಫ7 ಸರ್ವಿಸ್ ಸ್ಟೇ?ನ್ ಕಿರಿಯ ಇಂಜಿನಿಯರ್ 9480810331, ಆಲೂರು ಟೌನ್ ಶಾಖೆ ಸಹಾಯಕ ಇಂಜಿನಿಯರ್ 9448994956, ಪಾಳ್ಯ ಶಾಖೆ ಕಿರಿಯ ಇಂಜಿನಿಯರ್ 9449598632, ಮಗ್ಗೆ ಶಾಖೆ ಕಿರಿಯ ಇಂಜಿನಿಯರ್ 9445994955, ಆಲೂರು ಉಪವಿಭಾಗ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ 9448994954.

ಬೇಲೂರು ಟೌನ್ ಶಾಖೆ ಸಹಾಯಕ ಇಂಜಿನಿಯರ್ 9448994951, ಹಳೇಬೀಡು ಶಾಖೆ ಕಿರಿಯ ಇಂಜಿನಿಯರ್ 9448994952, ಅರೇಹಳ್ಳಿ ಶಾಖೆ ಕಿರಿಯ ಇಂಜಿನಿಯರ್ 9448994953, ಹಗರೆ ಶಾಖೆ ಕಿರಿಯ ಇಂಜಿನಿಯರ್ 9449598693, ತೊಳಲು ಶಾಖೆ ಕಿರಿಯ ಇಂಜಿನಿಯರ್ 9449598635, ಬೇಲೂರು 24ಫ7 ಸರ್ವೀಸ್ ಸ್ಟೇ?ನ್ ಸಹಾಯಕ ಇಂಜಿನಿಯರ್ 9480810332, ಬೇಲೂರು ಉಪವಿಭಾಗ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ 9448994950.

ಸಕಲೇಶಪುರ ಟೌನ್ ಶಾಖೆ ಸಹಾಯಕ ಇಂಜಿನಿಯರ್ 9448994958, ಬಾಳ್ಳುಪೇಟೆ ಕಿರಿಯ ಇಂಜಿನಿಯರ್ 9448994959, ಯಸಳೂರು ಕಿರಿಯ ಇಂಜಿನಿಯರ್ 9448994960, ಹೆತ್ತೂರು ಕಿರಿಯ ಇಂಜಿನಿಯರ್ 9449598692, ಹಾನುಬಾಳು ಕಿರಿಯ ಇಂಜಿನಿಯರ್ 9448994921, ಸಕಲೇಶಪುರ 24ಫ7 ಸರ್ವೀಸ್ ಸ್ಟೇ?ನ್ ಸಹಾಯಕ ಇಂಜಿನಿಯರ್ 9480810334, ಸಕಲೇಶಪುರ ಉಪವಿಭಾಗ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ 9448994957, ಕಾರ್ಯನಿರ್ವಾಹಕ ಇಂಜಿನಿಯರ್, ಸಕಲೇಶಪುರ ವಿಭಾಗ 9480841177 ಸಂಪರ್ಕಿಸಬಹುದಾಗಿದೆ.

# ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿ ಹುದ್ದೆಗೆ ಅರ್ಜಿ ಆಹ್ವಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಬೇಲೂರು ಶಿಶು ಅಭಿವೃದ್ಧಿ ಯೋಜನೆಗಳಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ-05 ಮತ್ತು ಅಂಗನವಾಡಿ ಸಹಾಯಕಿ-105 ಹುದ್ದೆ ಸೇರಿದಂತೆ ಒಟ್ಟು 110 ಗೌರವ ಸೇವೆಯ ಹುದ್ದೆಗಳನ್ನು ಭರ್ತಿ ಮಾಡಲು ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಬೇಲೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

ಸೂಚನೆಗಳು: ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಪಡೆದು ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು, ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ನೇಮಕಾತಿಯ ಮಾರ್ಗಸೂಚಿ/ ನಿಬಂಧನೆಗಳನ್ನು ಸ್ಪಷ್ಟವಾಗಿ ಓದಿಕೊಂಡು ನೀಡಲಾಗಿರುವ ಸೂಚನೆಯಂತೆ ಅರ್ಜಿಗಳನ್ನು ಭರ್ತಿಮಾಡಿ ಅವಶ್ಯಕ ದೃಢಿಕೃತ ದಾಖಲೆಗಳನ್ನು ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಿ ಅರ್ಜಿ ಸಲ್ಲಿಸುವುದು, ಆಫ್‌ಲೈನ್ ಮೂಲಕವೇ ಎಲ್ಲಾ ಅಗತ್ಯ ದಾಖಲಾತಿಗಳನ್ನು ಸಲ್ಲಿಸುವುದು, ತದನಂತರ ಸಲ್ಲಿಸುವ ದಾಖಲಾತಿಗಳನ್ನು ಪರಿಗಣಿಸಲಾಗುವುದಿಲ್ಲ.

ಅರ್ಜಿಯನ್ನು ಸಲ್ಲಿಸಲು ಜೂ.25 ರಂದು ಕೊನೆಯ ದಿನಾಂಕವಾಗಿರುತ್ತದೆ, ಹೆಚ್ಚಿನ ಮಾಹಿತಿಗಾಗಿ ಬೇಲೂರು ಶಿಶು ಅಭವೃದ್ಧಿ ಯೋಜನಾಧಿಕಾರಿಗಳುಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248